ಮಾಡಿದರು? ತಾವು ತಕ್ಷಣ ಆಲ್ಟರ್ನೇಟಿವ್ ಅರೇಂಜ್‌ಮೆಂಟ್ ಮಾಡಬೇಕು. ಪ್ರೈವೇಟ್ ಮ್ಯಾನೇಜ್‌ಮೆಂಟ್ ಜೊತೆ ತೀರ್ಮಾನವಾಗುವವರೆಗೆ ಜನ ಹೇಗೆ ಓಡಾಡಬೇಕು? ಓಡುತ್ತಿದ್ದ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಏಕೆ ನಿಲ್ಲಿಸಿದಿರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ:- ಈಗ ಸದನದಲ್ಲಿ ಮಂತ್ರಿಗಳು ತಕ್ಷಣ ಹೇಳಬೇಕು, ಮಾತುಕತೆ ಆದ ನಂತರ ಕೆ.ಎಸ್.ಆರ್.ಟಿ.ಸಿ. ಆದರೂ ಬಿಡಿ, ಖಾಸಗಿ ಬಸ್ಸ್ ಆದರೂ ಬಿಡಿ. . . .

ಉಪಾಧ್ಯಕ್ಷರು:- ಯಡಿಯೂರಪ್ಪನವರೇ ತಾವು ಎಲ್ಲಾ ಹೇಳಬೇಕು. ತಾವು ಹೇಳದಿದ್ದರೆ ಹೇಗೆ. . .?

(ಈ ಹಂತದಲ್ಲಿ ಶ್ರೀ ಬಾಲಕೃಷ್ಣರವರು ಬಾವಿಯಲ್ಲಿ ಧರಣಿ ಪ್ರಾರಂಭಿಸಿದರು)

ಶ್ರೀ ಸಿದ್ಧರಾಮಯ್ಯ:- ಶೂನ್ಯ ವೇಳೆಯಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ಮಾಡಿದ ತಕ್ಷಣ ಈಗಲೇ ಉತ್ತರ ಕೊಡಬೇಕು, ಈ ಗಳಿಗೆಯಲ್ಲಿ ಕೊಡಬೇಕು. . .

ಉಪಾಧ್ಯಕ್ಷರು:- ತಾವು ಎರಡು ನಿಮಿಷ ಎಲ್ಲರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ ಹೊಸಬರು ಇದ್ದಾರೆಂದು ಹೇಳಿದಿರಿ. ಅವರಿಗೆ ಕೊಟ್ಟ ಅವಕಾಶವನ್ನು ದುರುಪಯೋಗ ಮಾಡಿಕೊಂಡರೆ ಹೇಗೆ? ತಾವು ದಯಮಾಡಿ ವಿಚಾರ ಮಾಡಬೇಕು. ಎರಡೆರಡು ನಿಮಿಷ ಎಂದು ಹೇಳಿ ಅರ್ಧ ಗಂಟೆ ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾಗಡಿಯಿಂದ ಬೆಂಗಳೂರಿಗೆ ಪ್ರೈವೇಟ್ ಬಸ್ ಬಿಡುತ್ತಿದ್ದರು. ಏಳುವರೆ ಇತ್ತು ಆದನ್ನು ಹನ್ನೊಂದು ರೂಪಾಯಿ ಮಾಡಿದ್ದಾರೆ. ಪ್ರೊಟೆಸ್ಟ್ ಮಾಡಿದ್ದಕ್ಕೆ ನಿಲ್ಲಿಸಿದ್ದಾರೆ. ಅವರು ಕೆ.ಎಸ್.ಆರ್.ಟಿ.ಸಿ. ಮತ್ತು ನಮ್ಮ ಸಿಂಧ್ಯರವರಿಗೂ ಭೇಟಿ ಮಾಡಿದ್ದಾರೆ. ಆಲ್ಟರ್ನೇಟಿವ್ ಎಂಟು ಬಸ್‌ಗಳನ್ನು ಬಿಟ್ಟಿದ್ದರು, ಕೆ.ಎಸ್.ಆರ್.ಟಿ.ಸಿ. ರೂಟ್ ಅಲ್ಲದಿದ್ದರೂ ಬಸ್ಸನ್ನು ಬಿಟ್ಟಿದ್ದರು. ಈಗ ಅದು ನಿಂತಿದೆ; ಪ್ರಯಾಣಿಕರಿಗೆ ತೊಂದರೆಯಾಗಿದೆ. ಶಾಸಕರು ಓಡಾಡುವುದಕ್ಕಾಗುವುದಿಲ್ಲ. ನಾವು ನಿಮ್ಮನ್ನು ಏನು ಕೇಳುತ್ತಿದ್ದೇವೆ? ಆವತ್ತಿನಿಂದ ಹಿಂದೆ ಕೆ.ಎಸ್.ಆರ್.ಟಿ.ಸಿ.ನ ಬಸ್‌ನ ಟಿಂಪರವರಿ ಅರೇಂಜ್‌ಮೆಂಟ್ ಏನು ಮಾಡಿದ್ದರು ಅದನ್ನಾದರೂ ಮತ್ತೆ ಮಾಡಿ, ಆಮೇಲೆ ಖಾಸಗಿ ಮಾಲೀಕರ ಜೊತೆ ಮಾತನಾಡಿ ಸರಿಪಡಿಸಿ ಎಂದು ಹೇಳಿದ್ದಾರೆ. ಅದನ್ನು ಮಾಡುವುದಕ್ಕೆ ಏನು ತೊಂದರೆ ಅದನ್ನು ಮಾಡಿದರೆ ಅವರು ಒಪ್ಪುತ್ತಾರೆ.

ಉಪಾಧ್ಯಕ್ಷರು:- ಅವರು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಸಾರಿಗೆ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ. ಅವರ ಇಲಾಖೆ ಬೇಡಿಕೆ ಮೇಲೆ ಉತ್ತರ ಕೊಡುವುದಕ್ಕೆ ಈಗ ಅವರು ಬರುತ್ತಾರೆ. ಇವತ್ತು ಹೇಳಿದಂತಹ ವಿಚಾರವನ್ನು ಕೂಡ ಅವರ ಜೊತೆ ಪ್ರಸ್ತಾಪ ಮಾಡಿ ಅದಕ್ಕೆ ಪರಿಹಾರ ಕಂಡುಕೊಳ್ಳತಕ್ಕಂತಹ ಪ್ರಯತ್ನ